ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/66/2014–15 ದಿನಾಂಕ: 26–05–2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| ಶ್ರೀ ಹೆಚ್ ಮರ್ದಾನ್ ಅಲಿ ಮತ್ತು ಅಬ್ದುಲ್ ರೆಹಮಾನ್ ತಂದೆ ಖಾಜಾಹುಸೇನ್ ಸಾಬ್ | ಶ್ರೀ ಹೆಚ್ ಜಮೀರ್ ತಂದೆ ಗೂಡುಸಾಬ್ ಮತ್ತು ಮೂರು ಜನ ಇತರರು |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ದೇವಗೊಂಡನಹಳ್ಳಿ | 206/AB1 | 2.45 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನಿಗೆ ಸಂಬಂದಿಸಿದಂತೆ ವಾದಿಗಳು ದಿನಾಂಕ 03/02/2015 ರಂದು ನೊಂದಾಯಿತ ವಿಲ್ ದಸ್ತಾವೇಜು ಸಂಖ್ಯೆ 1/07–08 ದಿನಾಂಕ 13/04/2007 ರ ಪ್ರಕಾರ ತಮ್ಮ ಹೆಸರುಗಳಿಗೆ ಶ್ರೀಮತಿ ಹಾವನೂರು ಫಾತಿಮಾಬಿ ಇವರು ನೀಡಿದ ವಿಲ್ ಪ್ರಕಾರ ತಮ್ಮ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು ಕೋರಿರುತ್ತಾರೆ. ಈ ಮೇರೆಗೆ ಎಂ ಆರ್ ಸಂಖ್ಯೆ ಹೆಚ್38/2014–15 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ 21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ.ನೋಟೀಸು ಪ್ರಚುರಪಡಿಸಿದ ನಿಗದಿತ ಅವದಿಯೊಳಗೆ ಜಮೀರ್ ಹೆಚ್ ಗೌಸ್ ಶಬ್ಬೀರ ಮತ್ತು ರಜಿಯಾಬೀ ಎಂಬುವರು ತಕರಾರು ಅರ್ಜಿ ಸಲ್ಲಿಸಿದ ಕಂದಾಯ ನೀರೀಕ್ಷಕರು ಹಡಗಲಿ ಇವರು ಪ್ರಕರಣವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 16/04/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ 27/08/2015 ರಂದು ಅಂತಿಮಗೊಳಿಸಲಾಯಿತು.ವಾದಿಗಳು ಮತ್ತು ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ. ದಿನಾಂಕ 16/07/2015 ರಂದು ಪ್ರತಿವಾದಿಗಳ ಪೈಕಿ ರಜಿಯಾಬೀ ಮತ್ತು ಜಮೀರ್ ಇವರು ರಾಜಿ ಸಂಧಾನ ಪತ್ರ ಸಲ್ಲಿಸಿ ವಾದಿಗಳ ಪರವಾಗಿ ಹಕ್ಕು ಬದಲಾವಣೆ ಮಾಡಲು ತಮ್ಮ ತಕರಾರು ಇರುವುದಿಲ್ಲವೆಂದು ತಿಳಿಸಿರುತ್ತಾರೆ.ಆದರೆ ತಕರಾರು ಅರ್ಜಿಯಲ್ಲಿ ನಾಲ್ಕು ಜನರ ಸಹಿ ಇದ್ದು ಈ ಪೈಕಿ ಹೆಚ್ ಗೌಸ್ ಮತ್ತು ಹೆಚ್ ಶಬ್ಬೀರ್ ಇವರುಗಳು ರಾಜಿ ಸಂಧಾನ ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಮೇಲಾಗಿ ಯಾವುದೇ ವಿಲ್ ನ್ನು ಸೂಕ್ತ ಸಿವಿಲ್ ನ್ಯಾಯಾಲಯದಲ್ಲಿ ಪ್ರೋಬೇಟ್ ಆದ ನಂತರ ಕ್ರಮ ಜರುಗಿಸ ಬೇಕಾಗಿರುವ ಕಾರಣ ಈ ಕೆಳಕಂಡ

## ಆದೇಶ

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ನೊಂದಾಯಿತ ವಿಲ್ ದಸ್ತಾವೇಜು ಸಂಖ್ಯೆ 1/07–08 ದಿನಾಂಕ 13/04/2007 ನ್ನು ಸೂಕ್ತ ಸಿವಿಲ್ ನ್ಯಾಯಲಯದಲ್ಲಿ ಫ್ರೋಬೇಟ್ ಮಾಡಿಸಿಕೊಂಡು ದಾವಾ ಜಮೀನಿನ ಬಗ್ಗೆ ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ದೇವಗೊಂಡನಹಳ್ಳಿ | 206/AB1 | 2.45 |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.